ಶ್ರೀ ಎಸ್. ಆರ್. ಬೊಮ್ಮಾಯಿ.—ವರದಿಯನ್ನು ತರಿಸಿ ನೋಡಿದ್ದೇನೆ. ಯಾರೋ ಒಬ್ಬರು ಹಿಂದೆ ಕೆರೆಯ ಅಂಗಳವನ್ನು ಅನಧಿಕೃತವಾಗಿ ಅತಿಕ್ರಮಣ ಮಾಡಿದ್ದರು. ಅವರ ಹೆಸರು ಸಿದ್ದಪ್ಪ ಬಿನ್ ಕಲ್ಲಪ್ಪ ಎಂದು. ಅವರನ್ನು ಅಲ್ಲಿಂದ ಬಿಡಿಸಿದ್ದೇವೆ. ಎಲ್ಲಾದರೂ ಇಂಥ ನಿರ್ದಿಷ್ಟ ಪ್ರಕರಣಗಳಿದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು.—ಚು.ಪ್ರ. ೪೬೪. ಮಾನ್ಯ ಸದಸ್ಯರು ಹಾಜರಿರಲಿಲ್ಲ.

ಮಾರಾಟ್ಟಿ ಸಂಸ್ಥೆಯ ಸಿಬ್ಬಂದಿಯವರಿಗೆ ಬಡ್ತಿ.

೧೯೪. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಯಿಟ್ಟು ಉತ್ತರಿಸುವರೇ?

ಅ) ಮಾರಾಟ್ಟಿಗಳ ಸಿಬ್ಬಂದಿ ವರ್ಗವನ್ನು ಸರಕಾರಿ ನೌಕರರನ್ನಾಗಿ ಪರಿವರ್ತಿಸಿದ ದಿನಾಂಕ ಯಾವುದು.

ಆ) ಹಾಗೆ ಪರಿವರ್ತಿಸಿದ ಸಿಬ್ಬಂದಿ ವರ್ಗವನ್ನು ಮಾರುಕಟ್ಟೆ ಸಮಿತಿ ಸೇವೆ ಎಂದು ಪರಿಗಣಿಸುವುದಕ್ಕೆ ಕಾರಣವೇನು.

ಇ) ಸಮಿತಿಯಲ್ಲಿ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ನೌಕರರನ್ನು ಈ ತರಹ ವಿಂಗಡಿಸುವುದರಿಂದ ನೌಕರಿಯಲ್ಲಿ ಸಿಗಬೇಕಾಗಿರುವ ಬಡತಿಗಳು ಸಿಗದೇ ಇರುವುದರಿಂದ ಸಮಿತಿಯ ನೌಕರರು ಮಾನಸಿಕ ತೊಂದರೆಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ:

ಈ) ಅನ್ಯಾಯಕ್ಕೆ ಒಳಪಡಬಹುದಾದ ಮಾರು ಕಟ್ಟೆ ಸಮಿತಿಯ ನೌಕರರಿಗೆ ಯೋಗ್ಯ ನ್ಯಾಯ ದೊರಕಿಸಿ ಕೊಡುವವರಿಗೆ ಬೇರೆ ನೇಮಕಾತಿಯನ್ನು ತಡೆ ಹಿಡಿಯುವುದಕ್ಕಾಗಿ ತೆಗೆದುಕೊಳ್ಳಬಹುದಾದ ಕ್ರಮವೇನು:

(ಗ) ಉಚ್ಚ ನ್ಯಾಯಾಲಯದ ಆದೇಶವನ್ನು ನಿರಾಕರಿಸಿ ಸಿಬ್ಬಂದಿ ವರ್ಗಕ್ಕೆ ಕೊಡಬೇಕಾಗಿರುವ ಸವಲತ್ತುಗಳನ್ನು ಕೊಡದೆ-ಇರುವುದರಿಂದ ನ್ಯಾಯಾಲಯಕ್ಕೆ ಅವಮಾನ ಮಾಡಿದ ಹೊಣೆಗಾರಿಕೆ ಸರಕಾರದವರು ಹೊರುವರೆ

ಊ) ವರ್ಗಾವಣೆಯ ವಿಷಯದಲ್ಲಿ ಪಕ್ಷಪಾತವನ್ನು ತಡೆಯಲು ಸರಕಾರದವರು ತೆಗೆದುಕೊಳ್ಳಬಹುದಾದ ಕ್ರಮವೇನು:

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಸಚಿವರು).—

ಅ) ಮತ್ತು ಆ) ೧-೩-೧೯೮೨

ಇದನ್ನು ಕರ್ನಾಟಕ ವಿಧಾನ ಮಂಡಲವು ಅನುಮೋದಿಸಲಾದ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಅಧಿನಿಯಮ ೧೯೬೦ ರ ತಿದ್ದುಪಡಿಯಂತೆ ಮಾಡಲಾಗಿದೆ. ಪ್ರಕರಣ ೬೨ ಕ್ಕೆ ತಿದ್ದುಪಡಿ ಮಾಡಲಾದ ಪರಂತುಕ ಈ ಕೆಳಕಂಡಂತೆ ಇದೆ:—

"ಪರಂತು ರಾಜ್ಯ ಸರ್ಕಾರವು ಕಲಮು ೫೯ ರ ಉಪ ಕಲಮು ೧ (ಎ) ದನ್ವಯ ಪ್ರತ್ಯೇಕ ಅಧಿಸೂಚನೆ ಮಾಡಿ ಅಧಿಕಾರಿಗಳು ಮತ್ತು ನೌಕರರು ಹೊಂದಿರುವ ನಮೂದಾದ ಹುದ್ದೆಗಳಿಗೆ 'ಕರ್ನಾಟಕ ರಾಜ್ಯ ಮಾರುಕಟ್ಟೆ ಸಮಿತಿ ಸೇವೆ' ಎಂಬ ಪ್ರತ್ಯೇಕ' ಸೇವೆಯನ್ನು ರಾಜ್ಯ ಸರ್ಕಾರವು ರಚಿಸಬಹುದಾಗಿದೆ"

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಯಾವ ಪಕ್ಷಪಾತವೂ ಆಗಿಲ್ಲ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಮಾರುಕಟ್ಟೆಗಳ ಸಿಬ್ಬಂದಿ ವರ್ಗವನ್ನು ಸರ್ಕಾರಿ ನೌಕರರು ಎಂದು ಪರಿಗಣಿಸಿದ್ದೀರಿ. ಹಾಗೆ ಪರಿಗಣಿಸಿದ ಸಿಬ್ಬಂದಿ ಸೇವೆಯನ್ನು ಮಾರುಕಟ್ಟೆ ಸಮಿತಿ ಸೇವೆ ಎಂದು ಪ್ರತ್ಯೇಕವಾಗಿ ಭಾವಿಸುವುದಾಗಿ ಇಲ್ಲಿ ತಿಳಿಸಿದ್ದೀರಿ. ಇವರನ್ನು ಸರ್ಕಾರೀ ನೌಕರರು ಎಂದು ಪರಿಗಣಿಸಿದ ಮೇಲೆ ಎಷ್ಟು ಜನರನ್ನು ಹೊಸದಾಗಿ ನೇಮಕ ಮಾಡಿಕೊಂಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಆರ್.ಎಲ್. ಜಾಲಪ್ಪ.—ನಾವು ಚಾಲಕರು ಮತ್ತು ಜವಾನರನ್ನು ಮಾತ್ರ ಹೊಸದಾಗಿ ನೇಮಕ ಮಾಡಿಕೊಂಡಿದ್ದೇವೆಯೇ ಹೊರತು ಬೇರೆ ಹುದ್ದೆಗಳಿಗೆ ಯಾರನ್ನು ನೇಮಕ ಮಾಡಿಕೊಂಡಿಲ್ಲ. ಹಾಗೇನಾದರೂ ಮಾಡಿಕೊಳ್ಳುವ ಸಂದರ್ಭ ಬಂದಾಗ ನೇಮಕಾತಿ ನಿಯಮಗಳ ಪ್ರಕಾರ ಮಾಡಿಕೊಳ್ಳಲಾಗುತ್ತದೆ.

ಬೆಂಗಳೂರಿನ ಲೂವಿಸ್ ನೇಚುರಲ್ ಫುಡ್ ಪ್ರಾಡಕ್ಟ್ಸ್ ಕಂಪನಿ.

೫೦೩. ಶ್ರೀ ಬಸವರಾಜ್ (ಬ್ರಹ್ಮಾವರ).—ಮಾನ್ಯ ಕಂದಾಯ ಹಾಗೂ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಲೂವಿಸ್ ನೇಚುರಲ್ ಫುಡ್ ಪ್ರಾಡಕ್ಟ್ಸ್ ಎಂಬ ಕಂಪನಿಗೆ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕಿನ ಬೈಕಾಡಿ ಗ್ರಾಮದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಯ ಆಸುಪಾಸಿನ ೪೦ ಎಕರೆ ಭೂಮಿಯನ್ನು ಕೊಟ್ಟಿರುವುದು ನಿಜವೇ.

ಆ) ಹಾಗಿದ್ದಲ್ಲಿ ಲೂವಿಸ್ ನೇಚುರಲ್ ಫುಡ್ ಪ್ರಾಡಕ್ಟ್ಸ್ ಪಾಲುದಾರರು, ಒಡೆತನ ಹೊಂದಿರುವವರು ಯಾರ್ಯಾರು ಹಾಗೂ ಕಂಪನಿಯು ಸದರಿ ೪೦ ಎಕರೆ ಸ್ಥಳಗಳನ್ನು ಯಾವ ರೀತಿಯಲ್ಲಿ ವಿನಿಯೋಗಿಸಲಾಗಿದೆ.

ಇ) ಸದರಿ ಭೂಮಿಯನ್ನು ಎಕರೆವಾರು ಯಾವ ಜಿಲ್ಲೆಯಲ್ಲಿ ಮತ್ತು ಯಾವ ಪರತ್ತುಗಳಿಗೊಳಪಟ್ಟು ಅವರಿಗೆ ನೀಡಲಾಗಿದೆ.

ಶ್ರೀ ಎಸ್.ಆರ್. ಬೋಮ್ಮಯಿ (ಕಂದಾಯ ಹಾಗೂ ಯೋಜನಾ ಸಚಿವರು).—

ಅ) ಬೆಂಗಳೂರಿನ ಲೂವಿಸ್ ನೇಚುರಲ್ ಫುಡ್ ಪ್ರಾಡಕ್ಟ್ಸ್ ಎಂಬ ಕಂಪನಿಗೆ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕಿನ ಬೈಕಾಡಿ ಗ್ರಾಮದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಯ ಆಸುಪಾಸಿನ ೪೦ ಎಕರೆ ಭೂಮಿಯನ್ನು ಕೆ.ಐ.ಎ.ಡಿ.ಬಿ. ಯವರು ಕೊಟ್ಟಿರುವುದು ನಿಜ.

ಆ) ಶ್ರೀ ಪಿಲಿವ್ಸ್ ಲೂಯಿಸ್‌ರವರು ಲೂಯಿಸ್ ನ್ಯಾಷನಲ್ ಫುಡ್ಸ್ ಎಂಬ ಹೆಸರಿನಲ್ಲಿ ಉದ್ದಿಮೆಯನ್ನು ತಮ್ಮ ಒಡೆತನದಲ್ಲಿ ಸ್ಥಾಪಿಸಲು ಅಪೇಕ್ಷೆ ಪಟ್ಟಿದ್ದಾರೆ. ಸದರಿ ೪೦ ಎಕರೆ ಭೂಮಿಯನ್ನು ಸ್ಕಿಫ್ ಜ್ಯಾಕ್ ಮಿಷೀನಿನ ಸಂಸ್ಕರಣ ಘಟಕವನ್ನು ಸ್ಥಾಪಿಸಲು ನೀಡಲಾಗಿದೆ.

ಇ) ಸದರಿ ಭೂಮಿಯನ್ನು ಎಕರೆವಾರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲಾಗಿದೆ.

೧. ಜಮೀನಿನ ತಾತ್ಕಾಲಿಕ ದರವನ್ನು ಎಕರೆಯೊಂದಕ್ಕೆ ರೂ. ೭೫೦೦ ರಂತೆ ನಿಗದಿ ಮಾಡಿ ೪೦ ಎಕರೆಯ ಮೌಲ್ಯದ ಶೇ. ೧೦ ಭಾಗವನ್ನು ೬-೪-೮೪ ರಿಂದ ಒಂದು ತಿಂಗಳೊಳಗಾಗಿಯೂ ಹಾಗೂ ಉಳಿದ ಶೇ. ೮೯ ಭಾಗವನ್ನು ಮೇಲೆ ತಿಳಿಸಿದ ದಿನಾಂಕದಿಂದ ಆರು ತಿಂಗಳೊಳಗಾಗಿಯೂ ಕಟ್ಟಿ ನಂತರ ಜಮೀನಿನ ಕಬ್ಜೆಯನ್ನು ಪಡೆಯಬಹುದು.

೨. ಜಮೀನನ್ನು ಮಂಜೂರಾತಿಯಿಂದ ೧೧ ವರ್ಷದ ಗಂತಿಗೆ ಮತ್ತು ಮಾರಾಟದ ಮೇಲೆ ಮಾಡಲಾಗಿರುತ್ತದೆ.

೩. ಉದ್ದೇಶಿತ ಘಟಕವನ್ನು ಕರಾರು ಮತ್ತು ಗಂತಿಗೆ ಮಾರಾಟದ ಒಪ್ಪಂದದ ದಿನಾಂಕದಿಂದ ೨೦-೩-೮೭ ರೊಳಗೆ ಕಾರ್ಯೋನ್ಮುಖಗೊಳಿಸಬೇಕಾಗುತ್ತದೆ.